ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

MUNJAVU' Kannada Weekly, KOPPA-CHM. ಫೋನ್ : 114

ನೇ ವರ್ಷ 40ನೇ ಸಂಚಿಕೆ ಕೊಪ್ಪ 3-6-1990 ಭಾನುವಾರ ಬೆಲೆ ರೂ 60 ಪೈಸೆ

ಕಳ್ಳ ಗಂಧ ಸಹಿತ ಜೀಪ್ ವಶ : ಅದರ ಮಾಲಿಕ ಸೇರಿ ನಾಲ್ವರ ಸೆರೆ

ನ ರಾ. ಪುರ : ಗಂಧ ಕಳ್ಳ ಸಾಗಾಣಿಕೆಯು ಎಷ್ಟೇ ದೊಡ್ಡ ಪ್ರಕರಣವಾದರೂ ಆರೋಪಿಗಳು ತಪ್ಪಿಸಿಕೊಳ್ಳುವುದು ವಾಡಿಕೆ. ಆದರೆ ತನ್ನ ಕಳ್ಳತನ ಪತ್ತೆಯಾಗಲು ಸಾಧ್ಯವೇ ಇಲ್ಲವೆಂದು ದೃಢವಾದ ಆತ್ಮವಿಶ್ವಾಸದಿಂದ ಕಳ್ಳ ಸಾಗಣೆಗಿಳಿದ ಒಂದು ತಂಡ ಮಾಲು-ಜೀಪು ಸಮೇತ ಸಿಕ್ಕಿ ಬಿದ್ದಿದೆ.

ಜೀಪಿನೊಳಗೆ ಸೀಟಿನ ತಳದಲ್ಲಿ ಯಾರಿಗೂ ಗೊತ್ತಾಗದಂತೆ ಅಳವಡಿಸಲಾಗಿದ್ದ ಪೆಟ್ಟಿಗೆಯಲ್ಲಿ ಸುಮಾರು 14 ಸಾವಿರ ರೂ. ಬೆಲೆಯ 140 ಕಿಲೊ ಗಂಧ ಅಡಗಿಸಿಡಲಾಗಿತ್ತು. ಇದು ಯಾರಿಗೂ ತಿಳಿಯಲು ಸಾಧ್ಯವಿಲ್ಲವೆಂಬ ಧೈರ್ಯದಲ್ಲಿ ಬಹುಶಃ ಕಳ್ಳರು ತಪ್ಪಿಸಿಕೊಳ್ಳುವ ಯತ್ನ ಮಾಡಲಿಲ್ಲ. ಆದರೆ, ಚಿಕ್ಕಗ್ರಹಾರ ವಲಯ ಅರಣ್ಯಾಧಿಕಾರಿ ಕೆ. ಎನ್. ಲಕ್ಷ್ಮೀನಾರಾಯಣ್ ಮತ್ತು ಸಿಬ್ಬಂದಿಯ ಕೈಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಗಂಧವನ್ನು ಕೂಸಗಲ್ಲು ಮನ್ನಾ ಜಂಗಲಿಯಿಂದ ಸಾಗಿಸಲಾಗುತ್ತಿತ್ತು. ಕಾಸರಗೋಡಿನ ಕುಖ್ಯಾತ ಗಂಧ ಕಾರ್ಖಾನೆಯೊಂದರ ಸಂಬಂಧಿ ಹಾಗೂ ಲೋಕೋಪಯೋಗಿ ಗುತ್ತಿಗೆದಾರರೆನ್ನಲಾದ ಕೆ. ಅಬೂಬಕರ್‌ನೇ ಜೀಪ್ ಓಡಿಸುತ್ತಿದ್ದು, ಸಿಎಕ್ಸ್ 9849 ನಂಬರಿನ ಆ ಜೀಪು ಅವನದೇ ಎನ್ನಲಾಗಿದೆ. ಈ ಕಳ್ಳತನದಲ್ಲಿ ಅವನ ಸಂಗಡಿಗರಾಗಿದ್ದ ಯೂಸುಫ್, ಮುಸ್ತಾಫ್ ಮತ್ತು ಸಾರ್ಯ ಗ್ರಾಮದ ಎಸ್. ಟಿ. ಶಿವಣ್ಣ ಇವರುಗಳನ್ನೂ ಹಿಡಿಯಲಾಗಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. (ವರದಿ : ಎಂ. ಐ. ಶ್ರೀ.)

ಅಕಾಲ ಮಳೆ: ಭತ್ತದ ಬೆಳೆಗೆ ವ್ಯಾಪಕ ನಷ್ಟ

ಕೊಪ್ಪ: ಈ ವರ್ಷ ಬಹು ಮುಂಚಿತವಾಗಿ ಆರಂಭವಾಗಿರುವ ಮಳೆಯಿಂದಾಗಿ, ಮಲೆನಾಡಿನಲ್ಲಿ ಭತ್ತದ 2ನೇ ಸಾಗುವಳಿ ಮಾಡಿರುವ ರೈತರು ತೀವ್ರ ಕಷ್ಟ-ನಷ್ಟಗಳಿಗೀಡಾಗಿದ್ದಾರೆ.

ಬೆಳೆ ಹಣ್ಣಾಗಿ ಕೊಯ್ಲಿಗೆ ಬಂದ ಹೊತ್ತಿಗೆ ಸರಿಯಾಗಿ ಮಳೆ ಆರಂಭವಾದ್ದರಿಂದ ಕಾಲಂಶದಷ್ಟು ಜಮೀನಿನಲ್ಲೂ ಕೊಯ್ಲು ಮಾಡಲಾಗಿಲ್ಲ. ಆಕಸ್ಮಾತ್ ಕೊಯ್ಲಾಗಿರುವಲ್ಲೂ ಸಾಗಿಸಲಾಗದೆ, ತೆನೆಗಳಲ್ಲೇ ಮೊಳಕೆಯೊಡೆದಿವೆ.

ಕೊಪ್ಪ ತಾಲ್ಲೂಕೊಂದರಲ್ಲೇ ಕನಿಷ್ಠ 1000 ಕುಟುಂಬಗಳು ತಲಾ ಅರ್ಧ ಎಕರೆಯಿಂದ 4 ಎಕರೆವರೆಗೆ 2ನೇ ಬೆಳೆ ಮಾಡಿದ್ದಾರೆಂದು ಕೃಷಿಕ ಟಿ ವಿ ಎನ್. ಹೇರಳೆಯವರ ಒಂದು ಕರಡು ಅಂದಾಜು. ಸರಾಸರಿಯಲ್ಲಿ ಸುಮಾರು 2000 ಎಕರೆ ಸಾಗುವಳಿಯಾಗಿದ್ದು, ಕಾಲಂಶ ಕೊಯ್ಲು ಆಗಿರಬಹುದೆಂದಿಟ್ಟುಕೊಂಡರೂ 1500 ಎಕರೆಯ ಬೆಳೆ ಪೂರ್ತಿ ಹಾಳಾಗಿದೆ.

ರೈತರು ಈ ಬೇಸಾಯಕ್ಕೆ ಖರ್ಚು ಮಾಡಿದ್ದರಲ್ಲಿ ಎಕರೆಗೆ ಕನಿಷ್ಠ 1000 ರೂ. ನಷ್ಟವೆಂದು ಅಂದಾಜು ಹಿಡಿದರೂ, ಕೊಪ್ಪ ತಾಲ್ಲೂಕೊಂದರಲ್ಲೇ ಸುಮಾರು 15 ಲಕ್ಷ ರೂ. ಈ 'ಅಕಾಲ' ಮಳೆಯಿಂದ ನಷ್ಟವಾದಂತಾಗಿದೆ.

ಇಂಥ ಪರಿಸ್ಥಿತಿಯಲ್ಲಿ, ರೈತರ ಸಾಲ ಮರುಪಾವತಿಗೆ ಕಡೇ ಪಕ್ಷ 1 ವರ್ಷ ವಾಯಿದೆಯನ್ನಾದರೂ ಕೊಡಲಿ ಎನ್ನುತ್ತಾರೆ ಹೇರಳೆಯವರು. ಅಷ್ಟೇ ಅಲ್ಲದೆ, ಬೆಳೆ ವಿಮೆ ಸೌಲಭ್ಯವನ್ನು ನೀಡುವ ಬಗ್ಗೆಯೂ ಸಂಬಂಧಿಸಿದ ಅಧಿಕಾರಿಗಳು ತುರ್ತಾಗಿ ಯೋಚಿಸಬೇಕಿದೆ.

ನಾರ್ವೆಗೆ ಶೇ. 94

ಇಲ್ಲಿನ ಪ್ರೌಢ ಶಾಲೆಯಲ್ಲಿ 37 ವಿದ್ಯಾರ್ಥಿಗಳ ಪೈಕಿ ಇಬ್ಬರು ಮಾತ್ರ ಅನುತ್ತೀರ್ಣರಾಗಿ, ಶಾಲೆ 94.6 % ಫಲಿತಾಂಶ ಪಡೆದಿದೆ. ಪ್ರಥಮ 6, ದ್ವಿತೀಯ 15.

ಕಿಗ್ಗ

ಇಲ್ಲಿನ ಅಭಿನವ ರಾಮಾನಂದ ಪ್ರೌಢಶಾಲೆಯಲ್ಲಿ 44 ವಿದ್ಯಾರ್ಥಿಗಳ ಪೈಕಿ 6 ಜನ ಮಾತ್ರ ಅನುತ್ತೀರ್ಣರಾಗಿ, ಶಾಲೆ ...6% ಫಲಿತಾಂಶ ಪಡೆದಿದೆ. ಪ್ರಥಮ ...7; ದ್ವಿತೀಯ 11.

ಎಸ್ಸೆಸ್ಸೆಲ್ಸಿ ಫಲಿತಾಂಶ : ಒಂದು ತಿದ್ದುಪಡಿ

ಹರಿಹರಪುರ : ಇಲ್ಲಿನ ಅ. ರಾ. ಸ. ...ಯ ಕಾಲೇಜಿಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ. ...ರ ಫಲಿತಾಂಶ ಬಂದಿದೆ. (ಪ್ರಥಮ ...ರ್ಜೆ 31, ದ್ವಿತೀಯ 28.) 27 5 90 'ಮುಂಜಾವು'ನಲ್ಲಿ ಪ್ರಕಟವಾಗಿರುವುದು ...ರಡನೇ ಪಿ. ಯು. ಸಿ. ಫಲಿತಾಂಶ

ಕೊಪ್ಪ ನೀರು ಪೂರೈಕೆ ಬಗ್ಗೆ ಧರಣಿ ರದ್ದು

ಕೊಪ್ಪ : ಇಲ್ಲಿ ನಲ್ಲಿ ನೀರನ್ನು ಹಿಂದಿನಂತೆಯೇ ಬೆಳಗ್ಗೆ 6 ರಿಂದ 9 ಗಂಟೆ ಮತ್ತು ಸಂಜೆ 5 ರಿಂದ 8 ಗಂಟೆಯ ಅವಧಿಯಲ್ಲೇ ಬಿಡಬೇಕೆಂಬ ಸಾರ್ವಜನಿಕ ಹೋರಾಟ ಸಮಿತಿಯ ಒತ್ತಾಯವನ್ನು ಪುರಸಭೆಯವರು ಕಾರ್ಯಗತಗೊಳಿಸಲು ಒಪ್ಪಿಕೊಂಡಿದ್ದರಿಂದ ಉದ್ದೇಶಿತ ಧರಣಿ ಸತ್ಯಾಗ್ರಹವನ್ನು ಕೈ ಬಿಟ್ಟಿರುವುದಾಗಿ ಎ. ಜಿ. ಗೋಪಾಲ ಗೌಡ ತಿಳಿಸಿದ್ದಾರೆ.

ಶೇಣಿಯವರಿಗೆ ಸನ್ಮಾನ, ಯಕ್ಷಗಾನ ತಾಳ ಮದ್ದಲೆ

ಹರಿಹರಪುರ : ಇಲ್ಲಿನ ಶೇಣಿ ಬಳಗದವರಿಂದ ಯಕ್ಷಗಾನದ ಅಪ್ರತಿಮ ಕಲಾವಿದ ಶೇಣಿ ಗೋಪಾಲಕೃಷ್ಣ ಭಟ್ಟರಿಗೆ ಸನ್ಮಾನ ಮತ್ತು ಭೀಷ್ಮಾರ್ಜುನ ಎಂಬ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮ 8-6-90ನೇ ಶುಕ್ರವಾರ ರಾತ್ರಿ 9 ಗಂಟೆಗೆ ಹರಿಹರಪುರ ಮಠದಲ್ಲಿ ಏರ್ಪಾಡಾಗಿದೆ.

ದರ್ಶಿನಿ ಶಾಲೆಯ ಸ್ಪಷ್ಟನೆ

ಶೃಂಗೇರಿ : ಇಲ್ಲಿನ ದರ್ಶಿನಿ ಶಿಕ್ಷಣ ಸಂಸ್ಥೆಯ **ಕನ್ನಡ ಮಾಧ್ಯಮದ 4ನೇ** ತರಗತಿಯ ವರೆಗೂ ಈಗಾಗಲೇ ಶಿಕ್ಷಣ ಇಲಾಖೆಯ ಅನುಮೋದನೆ ದೊರೆತಿದ್ದು, ಇದೀಗ 5ನೇ ತರಗತಿಗೂ ಅನುಮೋದನೆ ದೊರಕಿದೆ. ಈ ವರ್ಷವೇ 5ನೇ ತರಗತಿ ಆರಂಭಿಸಲಾಗುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ ಗೋಪಾಲ ಹೆಗ್ಡೆ ತಿಳಿಸಿದ್ದಾರೆ.

7ನೇ ತರಗತಿ ವಿದ್ಯಾರ್ಥಿಗಳ ಬೇಸಿಗೆ ಶಿಬಿರ ಯಶಸ್ವಿ

ಹರಿಹರಪುರ : ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ ಮುಗಿಸಿ ಪ್ರೌಢಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಗುರಿಯನ್ನಿಟ್ಟುಕೊಂಡು ಇಲ್ಲಿನ ರಾಷ್ಟ್ರೋತ್ಥಾನ ಬಳಗವು ಹತ್ತು ದಿನಗಳ ಬೇಸಿಗೆ ಶಿಬಿರವನ್ನು ಮೇ 21ರಿಂದ ಇಲ್ಲಿನ ಕಿರಿಯ ಕಾಲೇಜಿನಲ್ಲಿ ಏರ್ಪಡಿಸಿತ್ತು.

ಪ್ರಮುಖವಾಗಿ, ಗಣಿತ, ವಿಜ್ಞಾನ, ಇಂಗ್ಲಿಷ್ ವಿಷಯಗಳನ್ನೂ, ಜೊತೆಗೆ ಬರವಣಿಗೆ, ಭಾಷೆಗಳನ್ನು (ಕನ್ನಡ, ಸಂಸ್ಕೃತ, ಹಿಂದಿ) ಬಳಸುವ ಬಗೆ ಹಾಗೂ ಸಾಮಾನ್ಯ ಜ್ಞಾನ, ರಸಪ್ರಶ್ನೆ, ಕರಕುಶಲ ಕಲಾ ತರಬೇತಿಯನ್ನೂ ಈ ಶಿಬಿರದಲ್ಲಿ ಅಳವಡಿಸಲಾಗಿತ್ತು. 22 ಬಾಲಕ – ಬಾಲಕಿಯರು ಪಾಲ್ಗೊಂಡಿದ್ದರು.

ಸಂಸ್ಥೆಯ ಪ್ರಿನ್ಸಿಪಾಲ್ ಎಸ್. ವಿ. ಅಡಿಗರ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಬಳಗದ ಸದಸ್ಯ ಕೆ. ಜಿ. ಎಲ್. ಶಾಸ್ತ್ರಿ ಮಾತನಾಡುತ್ತಾ, ಹಳ್ಳಿಗಾಡಿನ ಪ್ರಾಥಮಿಕ ಶಾಲೆಗಳಲ್ಲಿ 40 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕನನ್ನು ನಿಯಮಿಸುತ್ತಾರೆ. ಒಟ್ಟು 7 ತರಗತಿಗಳೂ, 70ರಿಂದ 120 ವಿದ್ಯಾರ್ಥಿಗಳೂ ಇರುವ ಶಾಲೆಗಳಲ್ಲಿ 2-3 ಅಧ್ಯಾಪಕರು ಮಾತ್ರ ಇದ್ದು. 27 ವಿಷಯ (ಸಬ್ಜೆಕ್ಟ್)ಗಳನ್ನು ವ್ಯವಸ್ಥಿತವಾಗಿ ಕಲಿಸಲಾಗದೆ ವಿದ್ಯಾರ್ಥಿಗಳನ್ನು ಸುಮ್ಮನೆ ಮುಂದೆ ತಳ್ಳುತ್ತಿರುವುದರಿಂದ ಪ್ರೌಢಶಾಲೆಗೆ ಪ್ರವೇಶಿಸುವ ಮಕ್ಕಳಲ್ಲಿ ಹೆಚ್ಚಿನವರ ಶೈಕ್ಷಣಿಕ ಮಟ್ಟ ನಂಬಲಸಾಧ್ಯವಾದಷ್ಟು ಕೆಳಗಿರುತ್ತದೆ ಆದ್ದರಿಂದ ಇಂದು ಪ್ರತಿ ಊರುಗಳಲ್ಲಿ ಈ ರೀತಿಯ ಬೇಸಿಗೆ ಶಿಬಿರ ಮತ್ತು 'ಬ್ರಿಡ್ಜ್ ಕೋರ್ಸ್'ಗಳ ಅಗತ್ಯವಿದೆ ಎಂದರು.

ರಾಮಪ್ರಸಾದ್ ಮತ್ತು ಛಾಯಾಪತಿ ಶಿಬಿರದ ಸಮನ್ವಯಾಧಿಕಾರಿಗಳಾಗಿದ್ದರು. ಬಳಗದ ಜಿಲ್ಲಾ ಸಂಚಾಲಕ ಕ ರಾ. ಶಿವಸ್ವಾಮಿ ಅತಿಥಿಯಾಗಿದ್ದರು. ರಾಮಪ್ರಸಾದ್ ಸ್ವಾಗತಿಸಿ, ಕೆ.ಆರ್. ಭಾಸ್ಕರಾಚಾರ್ ವಂದಿಸಿದರು.

(ವರದಿ: ಅನಿಲ್‌ಕುಮಾರ್.)

ಅತಿ ವಿಶಿಷ್ಟವಾದೊಂದು ಜಾತ್ಯತೀತ ವಿವಾಹ

ಇತ್ತೀಚಿಗೆ ಸರಳ ವಿವಾಹಗಳೂ ಜಾತ್ಯತೀತ (ಅಂತರ್ಜಾತಿ) ಮದುವೆಗಳೂ ಅಲ್ಲಲ್ಲಿ ನಡೆಯುತ್ತಿರುವುದು ಸಮಾಜದ ಹಿತದೃಷ್ಟಿಯಿಂದ ಒಂದು ಆಶಾದಾಯಕ ಸಂಗತಿ. ಅದರಲ್ಲೂ ಜಾತ್ಯತೀತ ಮದುವೆಗಳು ಹಳ್ಳಿಗಳಲ್ಲಿ ಕೂಡ ನಡೆಯತೊಡಗಿರುವುದೊಂದು ವಿಶೇಷ.

ಜಾತ್ಯತೀತ ಮದುವೆಗಳೆಂದರೆ ಸಾಮಾನ್ಯವಾಗಿ ರಿಜಿಸ್ಟರ್ಡ್ ಮದುವೆಗಳೇ ಹೆಚ್ಚು. ಅದಲ್ಲವಾದರೆ, ವಧೂವರರ ಕೇವಲ ಕೆಲವೇ ಸ್ನೇಹಿತರು, ಹೆಚ್ಚೆಂದರೆ ವಧು ಅಥವಾ ವರ–ಈ ಯಾರಾದರೊಬ್ಬರ ಕೆಲವು ಬಂಧುಗಳು ಸೇರಿ ಯಾವುದೋ ದೇವಸ್ಥಾನದಲ್ಲಿ ತಾಳಿ ಕಟ್ಟುವುದು. ಇಷ್ಟೇ. ಇಬ್ಬರ ತಂದೆ-ತಾಯಿಗಳೂ ಅಥವಾ ಕನಿಷ್ಠ ಪಕ್ಷ ಯಾರಾದರೊಬ್ಬರ ತಂದೆ-ತಾಯಿಗಳಾದರೂ ಈ ವಿವಾಹವನ್ನು ಬಹಿಷ್ಕರಿಸದೆ ಇರುವುದಿಲ್ಲ.

ಅಂತರ್ಜಾತಿ ಮದುವೆಗಳು ಸಹ ಸಾಮಾನ್ಯ ಮದುವೆಗಳಂತೆಯೇ ನಡೆಯಬೇಕು; ಹುಡುಗ–ಹುಡುಗಿ ಇಬ್ಬರ ತಂದೆ ತಾಯಿಗಳೂ ಭಾಗವಹಿಸಿ ಮದುವೆ ನೆರವೇರಿಸಬೇಕು; ಆಗ ಇಂಥ ವಿವಾಹಕ್ಕೆ ಸಮಾಜದಲ್ಲಿ ಹೆಚ್ಚು ಮಾನ್ಯತೆ ಸಿಕ್ಕಿ ಹೆಚ್ಚು ಹೆಚ್ಚು ಇಂಥ ಮದುವೆಗಳಾಗುತ್ತವೆ ಎಂದು ನಮ್ಮ ಮಿತ್ರರೊಬ್ಬರು ಯಾವಾಗಲೂ ಹಾರೈಸುತ್ತಿರುತ್ತಾರೆ.

ಕೊಪ್ಪದ ದಾಸಮಠದಲ್ಲಿ ಮೇ 27 ರಂದು ನಡೆದ ನಾಗರತ್ನ–ಶಂಕರ ಇವರ ವಿವಾಹ ಇಂಥದೇ ಒಂದು ಮಾದರಿ ವಿವಾಹವಾಗಿತ್ತು; ಬಹುಶಃ ಈ ಪ್ರಾಂತ್ಯಕ್ಕೇ ನೊಟ್ಟ ಮೊದಲನೆಯದಾಗಿತ್ತು. ಅರಣ್ಯ ಇಲಾಖೆಯಲ್ಲಿ ಹಂಗಾಮಿ ಉದ್ಯೋಗಿಗಳಾಗಿ ಹಲವು ವರ್ಷಗಳಿಂದ ದುಡಿಯುತ್ತಿರುವ ಈ ಇಬ್ಬರೂ ನಮ್ಮ ಜಾತಿ ವ್ಯವಸ್ಥೆಯಲ್ಲಿ ಬೇರೆ ಬೇರೆ 'ಕಡೆ' ಇರುವವರು. ಆದರೆ ಅವರಿಬ್ಬರ ತಂದೆ ತಾಯಿಯರೂ ಈ ಮದುವೆಯಲ್ಲಿ ತಮ್ಮ ತಮ್ಮ ಪಾತ್ರ ವಹಿಸಿದರು. ನಾಗರತ್ನರವರ ತಂದೆ ತಾಯಿಗಳಾದ ಹುಲುಮಗ್ಗೆಯ ಕೃಷ್ಣಮೂರ್ತಿ – ಸುಶೀಲಮ್ಮ ಹಲವು ಬಂಧು-ಮಿತ್ರರೆದುರಿಗೆ ವರನ ಕೈಹಿಡಿದು ಹಸೆಮಣೆಗೆ ಕರೆತಂದು ತಮ್ಮ ಮಗಳನ್ನು ಧಾರೆ ಎರೆದುಕೊಟ್ಟರು; ಶಂಕರನ ತಂದೆ ತಾಯಿಗಳಾದ ಬೆಳಗೊಳದ ಕೃಷ್ಣಯ್ಯ–ರುಕ್ಮಿಣಮ್ಮ ಅಷ್ಟೇ ಸರಳವಾಗಿ ಹೆಣ್ಣೊಪ್ಪಿಸಿಕೊಂಡರು.

ಸಂಪ್ರದಾಯದಂತೆಯೇ ಆದರೂ ಕೇವಲ ಒಂದು ಗಂಟೆಯೊಳಗೆ ಮುಗಿದ ಈ ಸರಳ ಸಮಾರಂಭಕ್ಕೆ ವಧೂವರರಿಬ್ಬರ ಆಪ್ತರು, ಸಹೋದ್ಯೋಗಿಗಳು, ಇಲಾಖೆಯ ಅಧಿಕಾರಿಗಳು ಮತ್ತು ಸಾಕಷ್ಟು ಮಂದಿ ಬಂಧುಗಳು ಬಂದಿದ್ದರು. ಸುಮಾರು 200 ಜನರಿಗೆ ಸರಳವಾದ ಸಿಹಿ ಊಟ ಏರ್ಪಡಿಸಿದ್ದರು.

ಇಂಥ ಮದುವೆಗೆ ಗಂಡು-ಹೆಣ್ಣಿನ ತಂದೆ-ತಾಯಿಗಳು ಒಂದು ವೇಳೆ ಪರೋಕ್ಷವಾಗಿ ಒಪ್ಪಿದ್ದಾಗಲೂ ಅವರು ಖುದ್ದಾಗಿ ಮದುವೆಯಲ್ಲಿ ಭಾಗವಹಿಸಲು ಸಾಮಾನ್ಯವಾಗಿ ಒಪ್ಪುವುದಿಲ್ಲ. "ಹೇಗೆ ಧಾರೆ–ಗೀರೆ ಮಾಡುವುದು? ನೋಡಿದವರು ಏನೆಂದಾರು?" ಎಂದು ಅಂಜುತ್ತಾರೆ. "ರಿಜಿಸ್ಟರ್ಡ್ ಆಗಿಬಿಡಿ" ಎನ್ನುತ್ತಾರೆ. ಇಂಥದೇ ಹಿಂಜರಿಕೆ ಕೃಷ್ಣಮೂರ್ತಿ–ಕೃಷ್ಣಯ್ಯ ದಂಪತಿಗಳಿಗೂ ಇದ್ದಿರಬಹುದು. ಆದರೂ ಮಕ್ಕಳ ಮಮತೆಯ ಮುಂದೆ ಆ ಹಿಂಜರಿಕೆ ಸೋತಿತು. ಹೀಗೆ ಮದುವೆ ಮಾಡಿದರೆ ಸಮಾಜದಲ್ಲಿ ಏನೂ ತೊಂದರೆ, ಅವಮಾನ ಆಗುವುದಿಲ್ಲ; ಇದನ್ನು ಬಹಳ ಜನ ಮೆಚ್ಚುತ್ತಾರೆ ಎಂಬುದಕ್ಕೆ ಈ ಹಿರಿಯರು ಮೇಲ್ಪಂಕ್ತಿಯಾದರು.

ಇಂಥ ಮದುವೆಗಳು ನಮ್ಮಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಆಗುವಂತಾದರೆ.... !

—ಸಂಪಾದಕ.

ಪದ್ಯದಂಗಳ

ಜಾತಿ

ಜಾತಿ ! ಜಾತಿ !! ಜಾತಿ !!!
ಏಕೆ ಈ ಬಗೆಯ ಭ್ರಾಂತಿ ?
ಹೊಮನಸ್ಸಿನಲ್ಲೂ ಭೀತಿ .
ಜಾತಿಯ ಬಗೆಗಳೆನಿತು ಅತಿ !
ಮೂಲ ತಾಯಿ ಯಾರು? ಭಾರತಿ
ಮಾಡವೇಕೆ ಅವಳ ಸ್ತುತಿ?
ಮನುಜಗೊಂದೆ 'ಮನುಜ' ಜಾತಿ
ವಿಂಗಡಿಸಿದಲ್ಲಿ ನೂರಾರು ಜಾತಿ
ಅಡ್ಡಿ ತಡೆಗಳೆಲ್ಲೆಡೆ ಮಿತಿ
ಕುಂಠಿತವಾಗುತ್ತಿದೆ ಪ್ರಗತಿ.
ಎಲೆ ಮಾನವ ಸುಮ್ಮನೇಕೆ ಕೂರುತಿ
ಸೊರಗುತ್ತಿಹಳು ಜಾತೀಯತೆಯ ಭಾರತಿ
ಮಾನವತೆಯ ಕಹಳೆಯೂದಿ
ಪ್ರಾರಂಭಿಸು ಕ್ರಾಂತಿ.

—ಕೆ. ಆರ್. ಯೋಗೀಶ,
(10 ನೇ ತರಗತಿ.)

ಮೇ 31 — 'ತಂಬಾಕು ರಹಿತ ದಿನ'

ತಂಬಾಕಿನ ಯಾವುದೇ ರೂಪದ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಜನತೆಗೆ ಮನದಟ್ಟು ಮಾಡುವ ಸಲುವಾಗಿ ಮೇ 31ರ ದಿನವನ್ನು ವಿಶ್ವಾದ್ಯಂತ 'ತಂಬಾಕು ರಹಿತ ದಿನ'ವನ್ನಾಗಿ ಆಚರಿಸಲು ವಿಶ್ವ ಆರೋಗ್ಯ ಸಂಸ್ಥೆ ಕರೆ ಕೊಟ್ಟಿತ್ತು.


ಅದೇ ಪ್ರಕಾರ ದಿನಾಚರಣೆಯೇನೋ ನಡೆದಿದೆ. ಆದರೆ ಇಂಥ ಎಲ್ಲಾ 'ಆಚರಣೆ'ಗಳೂ ಜನಸಾಮಾನ್ಯರ ಪಾಲಿಗೆ ಯಾವ
ಅರ್ಥವನ್ನೂ ಪರಿಣಾಮವನ್ನೂ ಹೊಂದಿರ
ನಮ್ಮಂಥ ದೇಶದಲ್ಲಿ ಇದರ ಪ್ರಯೋಜ
ಸೊನ್ನೆಯಿಂದ ಮೇಲಕ್ಕೆ ಎಷ್ಟು–ಎ
ಬುದು ಹೊಸ ವಿಷಯವೇನಲ್ಲ.

ಆದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಬ
ಗಿನ ವ್ಯಾಪಕ ಪ್ರಚಾರ, ಮನವೊಲಿಕೆ
ವಿಧಾನಗಳು ಬಹಳ ಪ್ರಭಾವ ಬೀ
ಎಂದು ವರದಿಗಳು ತಿಳಿಸುತ್ತಿವೆ.

ತಂಬಾಕು ಸೇವನೆ ಇದೇ ರೀತಿ ಮ
ದುವರಿದರೆ, ಸುಲಭದಲ್ಲಿ ನಿಯಂತ್ರಿಸಟ
ದಾದ ಈ ಪಿಡುಗಿಗೆ ಈಗಿನ ಪೃಥ್ವಿಯ ಜ
ಸಂಖ್ಯೆಯ ಹತ್ತರಲ್ಲೊಂದು ಭಾಗ –
ಸುಮಾರು 50 ಕೋಟಿ ಜನ—ಬಲಿಯಾ
ಬಹುದೆಂದು ವಿಶ್ವ ಆರೋಗ್ಯ ಸಂಸ್ಥೆ ಅ
ಕ ಪಟ್ಟಿದೆ. ತಂಬಾಕು ಸೇವನೆಯ ಕಾ
ದಿಂದ ಇದೀಗ ಪ್ರತಿ 13 ಸೆಕೆಂಡಿಗೊ
ರಂತೆ ಮೃತಪಡುತ್ತಿದ್ದು, ಪ್ರತಿ ವರ್ಷ
ಲಕ್ಷ ಜನ ಸಾಯುತ್ತಿದ್ದಾರೆ.

ತಂಬಾಕು ಸೇವಿಸುವವರು, ತಮ್ಮ
ಕ್ಕಳು–ಮರಿಯ ಬಾಳಿನ ಜವಾಬ್ದಾರಿ
ತಮ್ಮ ಮೇಲಿದೆ ಎಂಬುದನ್ನು ಜ್ಞಾ
ಕೊಂಡರೆ ಈ ಚಟದಿಂದ ಬಿಡುಗಡೆ
ದಲು ಸುಲಭವಾಗಬಹುದೆಂದು ವಿ.
ಸ್ಥೆಯ ಮಹಾ ನಿರ್ದೇಶಕರು ಕರೆ
ದ್ದಾರೆ.

ಅಂತರ ರಾಷ್ಟ್ರೀಯ ಪರಿಸರ ಸಂ
ಬೆಂಗಳೂರಿನ ಏಪ್ರಿಲ್ ಸಮಾವೇಶದ
ಡಾದ ಪ್ರತಿನಿಧಿ ರೊನಾಲ್ಡ್ ಲೀಜ್
ಸಿದ ತನ್ನ ಅನುಭವ ಈ ಸಂದರ್ಭದ
ಪಾಗುತ್ತದೆ. ಲೀಜ್ ದಿನಕ್ಕೆ ಹ
ಪ್ಯಾಕ್ ಸಿಗರೇಟು ಸೇದುವ 'ಚೈನ್
ಕರ್' ಆಗಿದ್ದರಂತೆ. ಆದರೆ ಒಂದು ದಿ
ರ ಪುಟ್ಟ ಮಗ ಶಾಲೆಯಿಂದ ಬಂದ
"ಪಪ್ಪಾ, ನೀನು ಸಿಗರೇಟು ಸೇ
ರಿಂದ ನಿನಗೆ ಮಾತ್ರವಲ್ಲ, ನನಗೂ
ಕಂತೆ. ಶಾಲೆಯಲ್ಲಿ ಹಾಗೆಂತ ಹೇ
ದ್ದಾರೆ...." ಎಂದಾಗ, ಈ ವಿಚಾರ
ದ್ದೂ, ತಪ್ಪು ಮಾಡುತ್ತಿದ್ದ ಲೀಜ್
ನೆದುರು ತನ್ನ ಅಪರಾಧಕ್ಕೆ ಸಮಜಾ
ಕೊಡಲಾರದೆ ಅಂದಿನಿಂದ ಸಿಗರೇ
ಬಿಟ್ಟುಬಿಟ್ಟರಂತೆ. —ನಾಗೆ



ಗುರು

ಸಂಪಗೆ ಹೂವನು ಸಂಪಗೆ ಹೂವೆಂ–
ದೇತಕೆ ಕರೆವರು ಹೇಳಮ್ಮಾ !—
ಹಿಂದಿನ ಜನರದಕಾ ಹೆಸರಿಟ್ಟರು,
ಸಂಪಗೆ ಎನ್ನುವೆವದರಿಂದ.—
ಬೇರೆಯ ಹೆಸರುಗಳಾಗಿನ ಜನರಿಗೆ
ತಿಳಿದಿರಲಿಲ್ಲವೆ ಏನಮ್ಮಾ ?
ಸಂಪಗೆಗಿಂತಲು ತಂಪಿಗೆ ಎಂದಿರೆ
ಇಂಪಾಗಿರುವುದು ಕೇಳ್ವರಿಗೆ.
ಜನರೇನಮ್ಮಾ ಹಿಂದಿನದೆಂದರೆ
ಕಂಗಳ ಮುಚ್ಚಿಯೆ ಪೂಜಿಪರು.
ನನ್ನೀ ಸಲಹೆಯನಾರೂ ಕೇಳರು,
ತಂಗಿಯು ಒಬ್ಬಳೆ ಒಪ್ಪಿಹಳು.
ಕಾಳಗೆ ಹೇಳಿದೆ, ಜಟ್ಟಿಗೆ ಹೇಳಿದೆ,
ತಿಮ್ಮಗೆ ದಿನ ದಿನ ಬೋಧಿಸಿದೆ.
ಎಲ್ಲಾ ಸಂಪಗೆ ಸಂಪಗೆ ಎಂಬರು ;
ತಂಪಿಗೆ ಎನ್ನುವರಾರಿಲ್ಲ !
ನಾನೂ ತಂಗಿಯು ತಂಪಿಗೆ ಎಂಬೆವು,
ನೀನೂ ತಂಪಿಗೆ ಎನ್ನಮ್ಮಾ !—
ಆಗಲಿ ! ನಾನೂ ತಂಪಿಗೆ ಎಂಬೆನು :
ನನಗೂ ತಂಗಿಗು ನೀನೆ ಗುರು !

—ಕುವೆಂಪು

(ಅವರ 'ನನ್ನ ಮನೆ' ಶಿಶು ಗೀತೆಗಳ ಸಂಕಲನದಿಂದ—ಕೃತಜ್ಞತೆಗಳೊಂದಿಗೆ.)

ತಂದೆ ಕಲಿಸಿದ ಪಾಠ

ಸತೀಶನ ಗೆಳೆಯ ಕುಮಾರ ಒಮ್ಮೆ ಅವನನ್ನು ಕರೆದುಕೊಂಡು ಬಜಾರಿಗೆ ಹೋದ. ಹಣ್ಣಿನ ಅಂಗಡಿಗಳಿಗೆ ಹೋಗಿ ಹಣ್ಣಿನ ಬೆಲೆ ವಿಚಾರಿಸಿ ಒಂದು ಹಣ್ಣು ಎತ್ತಿಕೊಂಡು ರುಚಿ ನೋಡಿ, ಮುಂದೆ ಹೋಗುತ್ತಿದ್ದ "ನೀನೂ ರುಚಿ ನೋಡು" ಎಂದು ಸತೀಶನಿಗೆ ಹೇಳಿದ. ಆದರೆ ಸತೀಶನಿಗೆ ಹಾಗೆ ಮಾಡಲು ನಾಚಿಕೆ, ಸಂಕೋಚ. ಆದರೂ ಗೆಳೆಯನ ಒತ್ತಾಯದಿಂದ ಒಂದು ಕಡೆ ಅವನು ಹಣ್ಣಿನ ರುಚಿ ನೋಡಿದವನೇ ಕೊಂಡು ಕೊಳ್ಳಲು ಮುಂದಾದ. ಆಗ ಕುಮಾರ ಅವನನ್ನು ತಡೆದು, "ಬೆಲೆ ತುಂಬಾ ಹೆಚ್ಚಾಯ್ತು" ಎಂದು ಮುಂದೆ ನಡೆದ.

ಹೀಗೆ ಒಂದೆರಡು ಕಡೆ ಮಾಡಿದ ನಂತರ ಸತೀಶನಿಗೂ ಅಭ್ಯಾಸವಾಯ್ತು. ಹುಡುಗರು ಇನ್ನೂ ನಾಲ್ಕಾರು ಅಂಗಡಿಗಳಲ್ಲಿ ಹೀಗೆ ರುಚಿ ನೋಡಿದ ನಂತರ, "ಹೊಟ್ಟೆ ತುಂಬಿತು ಇನ್ನು ಹಣ್ಣು ಕೊಳ್ಳುವ ಅಗತ್ಯವಿಲ್ಲ" ಎಂದು ಹೇಳಿ ಕುಮಾರ ಬಜಾರಿನಿಂದ ಹೊರ ನಡೆದ.

ಮುಂದೊಂದು ದಿನ ಸತೀಶನ ತಂದೆ ಚಪ್ಪರ ದ್ರಾಕ್ಷಿ ಹಣ್ಣುಗಳನ್ನು ಕೊಳ್ಳಲು ಬಜಾರಿಗೆ ಹೋದರು. ಅವರು ಅಂಗಡಿಗಳಲ್ಲಿ ಬೆಲೆ ವಿಚಾರಿಸಿ ಮುಂದೆ ಹೋಗುತ್ತಿದ್ದರು; ಹಣ್ಣಿನ ರುಚಿ ನೋಡುತ್ತಿರಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲಿ ಸತೀಶನಿಗೆ ಇದು ಬೇಜಾರು ಬರಿಸಿತು. ಅವನು ಒಂದು ಅಂಗಡಿಯಲ್ಲಿ ಅಪ್ಪ ಸ್ವಲ್ಪ ಮುಂದೆ ಹೋದೊಡನೆ ಒಂದು ಹಿಡಿ ದ್ರಾಕ್ಷಿ ಹಣ್ಣುಗಳನ್ನು ತೆಗೆದು ಬಾಯಿಗೆ ಹಾಕಿಕೊಂಡ.

ಅಂಗಡಿಯವ ಇದನ್ನು ಗಮನಿಸಲಿಲ್ಲ. ತಂದೆಯೂ ಗಮನಿಸಲಿಲ್ಲ ಎಂದುಕೊಂಡ ಸತೀಶ. ಆದರೆ ತಂದೆ ಹಿಂದಕ್ಕೆ ಬಂದು ಆ ಅಂಗಡಿಯಲ್ಲೇ 2 ಕಿಲೊ ದ್ರಾಕ್ಷಿ ಕೊಡಲು ಹೇಳಿದರು.

"ಇಲ್ಲಿ ಚೆನ್ನಾಗಿಲ್ಲ. ಬೆಲೆಯೂ ಹೆಚ್ಚು...." ಎಂದ ಸತೀಶ.

ಅದಕ್ಕೆ ತಂದೆ, "ಛೀ ನಿನ್ನ! ನಾಚಿಕೆಯಾಗುವುದಿಲ್ಲವೆ? ಏನು ಬೇಕೆಂದರೂ ನಾನೇ ತೆಗೆಸಿಕೊಡುತ್ತೇನೆ ಆದರೂ ಇಂಥ ಪ್ರವೃತ್ತಿ ಕಲಿತಿದ್ದೀಯಲ್ಲ. ನಿನ್ನನ್ನು ನೋಡಿದರೇ ನಾಚಿಕೆಯಾಗುತ್ತದೆ. 'ಇಂದು ಒಂದು ಅಡಿಕೆ ಕದ್ದವ ನಾಳೆ ಆನೆ ಕದ್ದಾನು' ಎನ್ನುತ್ತಾರೆ...." ಎಂದವರೇ ದ್ರಾಕ್ಷಿ ಕೊಳ್ಳದೆ ಮನೆಗೆ ನಡೆದರು.

ಸತೀಶನಿಗೆ ತುಂಬಾ ಅವಮಾನವಾಯಿತು. ತಂದೆ ಎರಡು ಪೆಟ್ಟು ಕೊಟ್ಟಿದ್ದರೂ ಇಷ್ಟು ದುಃಖವಾಗುತ್ತಿರಲಿಲ್ಲ. ಅಂದಿನಿಂದ ಅವನು ತಂದೆ ಕಲಿಸಿದ ಈ ಪಾಠವನ್ನು ಎಂದೂ ಮರೆಯಲಿಲ್ಲ. (ಸಾಧಾರ)

ನಿಮಗೆ ಗೊತ್ತೇ?

● ಒಂಟೆಯು 34 ದಿನ ನೀರಿಲ್ಲದೆ ಬದುಕುತ್ತಾ, ಸುಮಾರು 530 ಮೈಲು ಪ್ರಯಾಣಿಸಬಲ್ಲದು.

● ಪ್ರಾನ್ ಎಂಬ ಸಮುದ್ರ ಪ್ರಾಣಿಯು ಮುಂದಕ್ಕೆ ನಡೆಯಬಲ್ಲದು ಮತ್ತು ಹಿಂದಕ್ಕೆ ಈಜಬಲ್ಲದು. (ಸಾಧಾರ)

ಓದುಗರ ಪತ್ರಗಳು

ಅಳಿದ ಅಸಾಮಾನ್ಯ ಕಲಾವಿದ ನಾವುಡರು

ಪ್ರಿಯರೆ,

ಯಕ್ಷಗಾನ ಕಲಾಭಿಮಾನಿಗಳೆಲ್ಲರ ಮೆಚ್ಚಿನ ಭಾಗವತರಾಗಿದ್ದ ಕಾಳಿಂಗ ನಾವುಡರವರು ಸೋಮವಾರ ತಮ್ಮ ಬೈಕಿನಲ್ಲಿ ಉಡುಪಿಯಿಂದ ಪ್ರಯಾಣ ಮಾಡುತ್ತಿದ್ದಾಗ ವ್ಯಾನ್ ಡಿಕ್ಕಿ ಹೊಡೆದು ನಿಧನರಾದ ಸುದ್ದಿ ಬರಸಿಡಿಲಿನಂತೆ ಬಂದೆರಗಿದೆ.

ದಿ॥ ಕಾಳಿಂಗ ನಾವುಡರು ಯಕ್ಷಗಾನ ರಂಗದ ಒಬ್ಬ ಉತ್ತಮ ವ್ಯಕ್ತಿಯಾಗಿದ್ದರು. ಅನೇಕ ವರ್ಷಗಳಿಂದ ಸಾಲಿಗ್ರಾಮ ಮೇಳದಲ್ಲಿ ಭಾಗವತರಾಗಿದ್ದು, ಅಪಾರ ಜನಪ್ರಿಯತೆ ಗಳಿಸಿ, ಜನರಿಂದ ಒಬ್ಬ ಉತ್ತಮ ಭಾಗವತರೆನ್ನಿಸಿಕೊಂಡವರು.

ಅವರು ಸ್ವತಃ ಕೆಲವು ಪ್ರಸಂಗಗಳನ್ನು ರಚಿಸಿ ಪ್ರಯೋಗ ಮಾಡಿದ್ದಾರೆ ಅವುಗಳಲ್ಲಿ 'ಸಂಪೂರ್ಣ ನಾಗಶ್ರೀ', 'ಚೆಲುವೆ ಚಿತ್ರಾವತಿ' ಪ್ರಮುಖವಾಗಿವೆ. ಅಲ್ಲದೆ, ಇತ್ತೀಚೆಗೆ ಅವರ 'ಗದಾಯುದ್ಧ' ಎಂಬ ವಿಡಿಯೊ ಕ್ಯಾಸೆಟ್ ತುಂಬಾ ಜನಮನ್ನಣೆ ಗಳಿಸಿದೆ. ಇಂಥ ಅಸಾಧಾರಣ ಪ್ರತಿಭಾವಂತರಾಗಿದ್ದ ನಾವುಡರಿಗೆ 'ರಸರಾಗ ಚಕ್ರವರ್ತಿ' ಮುಂತಾದ ಅನೇಕ ಬಿರುದುಗಳು ಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಇಂಥ ಮಹಾನ್ ಕಲಾವಿದನನ್ನು ನಾವು ಕಳೆದುಕೊಂಡಿದ್ದೇವೆ. ಆದರೆ, "ಅಳಿವುದು ಕಾಯ ಉಳಿವುದು ಕೀರ್ತಿ" ಎಂಬ ಹಿರಿಯರ ನಾಣ್ಣುಡಿಯಂತೆ ನಾವುಡರ ಹೆಸರು ಅಜರಾಮರವಾಗಿ ಉಳಿಯಲಿದೆ.

—ಎಂ. ಎಸ್. ಸುಬ್ರಮಣ್ಯ,
ಮೂತವಳ್ಳಿ

ಬೆಳ್ಳಿಹಬ್ಬದತ್ತ ಬಸ್ರಿಕಟ್ಟೆ ಪ್ರೌಢಶಾಲೆ

ಪ್ರಿಯರೆ,

ಬಸರಿಕಟ್ಟೆಯ ಶ್ರೀ ಸದ್ಗುರು ವಿದ್ಯಾ ಸಂಸ್ಥೆಯ ಪ್ರೌಢಶಾಲೆ ಇದೀಗ 25 ನೇ ವರ್ಷದಲ್ಲಿ ನಡೆಯುತ್ತಿದೆ. ಈ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯ ಮೊದಲ ತಂಡ ಶೇ. 78 ರಷ್ಟು ಫಲಿತಾಂಶ ಗಳಿಸಿತ್ತು. ಅದೇ ಘನತೆ ಪರಂಪರೆಗಳನ್ನು ಶಾಲೆ ಇಂದಿಗೂ ಉಳಿಸಿಕೊಂಡು ಬಂದಿದೆ. ಇದಕ್ಕೆ ಕಾರಣಕರ್ತರಾದ ಎಲ್ಲಾ ಮುಖ್ಯೋಪಾಧ್ಯಾಯರು ಹಾಗೂ ಉಪಾಧ್ಯಾಯ ವೃಂದದವರಿಗೂ ಪೋಷಕರು ಮತ್ತು ಆಡಳಿತ ಮಂಡಳಿಯವರು ಕೃತಜ್ಞರು.

ಈ ವರ್ಷ ಶಾಲೆ ರಜತೋತ್ಸವ ಆಚರಿಸಬೇಕಾದ ವರ್ಷ. ಈ ಆಚರಣೆಯ ನೆನಪು ಉಪಯುಕ್ತವೂ ಆಗಿರಬೇಕೆಂಬ ದೃಷ್ಟಿಯಿಂದ ಆಡಳಿತ ಮಂಡಳಿಯವರು 10 ಲಕ್ಷ ರೂ. ವೆಚ್ಚದ 'ವಿವಿಧೋದ್ದೇಶ ಕ್ರೀಡಾ ಭವನ'ದ ಯೋಜನೆ ರೂಪಿಸಿದ್ದಾರೆ.

ಈ ಕಾರ್ಯಕ್ಕೆ ವಿದ್ಯಾಭಿಮಾನಿಗಳಾದ ದಾನಿಗಳು, ಪೋಷಕರು ಹಾಗೂ ಹಳೆ ವಿದ್ಯಾರ್ಥಿಗಳು ಕೊಡುಗೈಯ ದೇಣಿಗೆಗಳನ್ನು ನೀಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ

ಗುಡ್ಡೇತೋಟ ಸುಬ್ಬರಾವ್,
ಶಾಲಾ ಆಡಳಿತ ಮಂಡಳಿ ಉಪಾಧ್ಯಕ್ಷ.

ಸೋರುವ ಸಾರಿಗೆ

ಪ್ರಿಯರೆ,

ಮಳೆಗಾಲ ಬಂತೆಂದರೆ ಮಲೆನಾಡಿನ ಬಸ್‌ಗಳಲ್ಲಿ ಪ್ರಯಾಣಿಕರ ತಲೆಯ ಮೇಲೆ ನೀರು ಸೋರಲು ಶುರು! ಹಲವು ಬಸ್‌ಗಳಲ್ಲಿ ಪ್ರಯಾಣಿಕರು ಛತ್ರಿ ಬಿಡಿಸಿ ಹಿಡಿದುಕೊಂಡೇ ಕೂತಿರುವುದನ್ನು ನೋಡಬಹುದು.

ಈಗಂತೂ 1-6-90 ರಿಂದ ಬಸ್‌ಗಳಲ್ಲಿ ಪ್ರಯಾಣ ದರವನ್ನೂ ರೂಪಾಯಿಗೆ 25 ಪೈಸೆಯಂತೆ ಹೆಚ್ಚಿಸಿದ್ದಾರೆ. ಈಗಲಾದರೂ ಸೋರದ ಬಸ್‌ಗಳನ್ನು ಓಡಿಸಬಾರದೆ ?

ಸಂಬಂಧಿಸಿದ ಸಾರಿಗೆ ಅಧಿಕಾರಿಗಳು ಇತ್ತ ಗಮನಹರಿಸಬೇಕಾಗಿದೆ.

ಎಂ. ಯೂಸುಫ್,
ಜಯಪುರ.

ಕೊಪ್ಪ ಕೆಳಪೇಟೆಯಲ್ಲಿ ಸಂಚರಿಸುವ ವಾಹನಗಳೂ ಪಾದಚಾರಿಗಳೂ

ಪ್ರಿಯರೆ,

ಕೊಪ್ಪ ಕೆಳಪೇಟೆ ಮುಖ್ಯ ರಸ್ತೆಯ ಇಕ್ಕೆಲಗಳಲ್ಲಿ ಅಂಗಡಿ–ಮುಂಗಟ್ಟೆಗಳಿದ್ದು ಜನರಿಂದ ಸದಾ ಗಜಿಬಿಜಿಗೊಂಡಿರುತ್ತದೆ. ರಸ್ತೆ ಅಷ್ಟಾಗಿ ಅಗಲವಿಲ್ಲವಾದರೂ, ಇಕ್ಕೆಲದ ವ್ಯಾಪಾರಿಗಳು ಹಾಗೂ ವ್ಯಾಪಾರಕ್ಕೆ ಬಂದವರು ತಮ್ಮ ವಾಹನಗಳನ್ನು ರಾಜಾರೋಷವಾಗಿ ರಸ್ತೆಯಲ್ಲಿ ನಿಲ್ಲಿಸುವುದರಿಂದ ಪಾದಚಾರಿಗಳಿಗೂ, ಶಾಲೆಗೆ ಹೋಗಿ ಬರುವ ಮಕ್ಕಳಿಗೂ ತುಂಬಾ ಕಷ್ಟವಾಗುತ್ತದೆ.

ಮಳೆಗಾಲದಲ್ಲಂತೂ ಎದುರು ಬದುರು ಬರುವ ಸ್ಪುಟ್ನಿಕ್ ವೇಗದ ಬಸ್ಸುಗಳು, ಅವುಗಳ ಕರ್ಣಭೇದಕ ಹಾರ್ನ್‌ಗಳು, ಅವು ಹಾರಿಸುವ ಕೆಂಪು ಕಾರಂಜಿಗಳು ನಡೆದಾಡುವವರನ್ನು ಕೆಂಪುಮಯರನ್ನಾಗಿ ಮಾಡುತ್ತವೆ. ಇದೀಗ ಶಾಲೆಗಳು ಪ್ರಾರಂಭ ಆಗುವುದರಿಂದ ಸಣ್ಣ ಮಕ್ಕಳು ಈ ವಾಹನಗಳ ಎಡೆಯಿಂದ ಹೋಗಿ ಬರಬೇಕಾದರೆ ಜೀವದ ಆಸೆ ಬಿಟ್ಟೇ ನಡೆಯಬೇಕು.

ಪುರಸಭೆಯವರು ಈ ಬಗ್ಗೆ ಕಟ್ಟುನಿಟ್ಟಾಗಿ ಸೂಕ್ತ ಕ್ರಮ ಕೈಗೊಳ್ಳುವರೆ?

—ಸುಮಿತ್ರಾ ಶಂಕರಪ್ಪ,
ಕೆಳಪೇಟೆ, ಕೊಪ್ಪ.

ಅತಿಭೇದಿರೋಗ ಮತ್ತು ಅದರ ನಿಯಂತ್ರಣ

ದಿನಕ್ಕೆ ಮೂರು ಅಥವಾ ಅದಕ್ಕೂ ಹೆಚ್ಚು ಬಾರಿ ನೀರಾಗಿ ಭೇದಿ ಮಾಡಿಕೊಳ್ಳುವ ವ್ಯಕ್ತಿಯನ್ನು ಅತಿಭೇದಿ ರೋಗದಿಂದ ಬಳಲುತ್ತಿರುವ ರೋಗಿ ಎಂದು ತಿಳಿಯಬೇಕು.

ಅತಿ ಭೇದಿ ರೋಗದ ಕಾರಣಗಳು :

ಇದೊಂದು ಸೂಕ್ಷ್ಮಾಣುವಿನಿಂದ ಬರುವ ರೋಗ. ಈ ಸೂಕ್ಷ್ಮಾಣುಗಳು ರೋಗಿಯ ಮಲದಿಂದ ಹೊರಬರುತ್ತವೆ. ಈ ಕ್ರಿಮಿಗಳು ಆರೋಗ್ಯವಂತ ವ್ಯಕ್ತಿಯ ಶರೀರವನ್ನು ಆಹಾರ, ಹಾಲು, ನೀರು, ಪಾತ್ರೆಗಳು, ಕೊಳಕು ತುಂಬಿದ ಉಗುರು, ನೊಣ— ಇವುಗಳ ಮೂಲಕ ತಲುಪುತ್ತವೆ.

ರೋಗದ ಲಕ್ಷಣಗಳು

ನೀರಾಗಿ ಆಗುವ ಭೇದಿ. ದಿನಕ್ಕೆ 3 ಅಥವಾ ಅದಕ್ಕಿಂತ ಹೆಚ್ಚು ಸಲ. ಇದರೊಂದಿಗೆ ವಾಂತಿ ಮತ್ತು ಹೊಟ್ಟೆನೋವು. ಬಾಯಾರಿಕೆ ಮತ್ತು ಬಳಲಿಕೆ. ನಾಲಿಗೆ ಒಣಗುತ್ತಿರುವುದು. ಚರ್ಮ ತಣ್ಣಗಾಗುವುದು. ಕಣ್ಣುಗಳು ಗುಳಿ ಬೀಳುವುದು. ದೇಹದ ಉಷ್ಣಾಂಶ ಕಡಿಮೆಯಾಗುವುದು. ದೇಹದ ವಿವಿಧ ಭಾಗಗಳಲ್ಲಿ ಸ್ನಾಯುಗಳು ಸೆಟೆದುಕೊಳ್ಳುವುದು. ಎಳೆಯ ಮಕ್ಕಳಲ್ಲಿ ನೆತ್ತಿ ಗುಳಿ ಬೀಳುವುದು. ಮೂತ್ರ ಕಡಿಮೆಯಾಗುತ್ತಾ ಹೋಗಿ ಮುಂದೆ ಸಂಪೂರ್ಣ ನಿಲ್ಲಬಹುದು. ಪ್ರಜ್ಞಾಹೀನನಾಗಬಹುದು.

ಅತಿಭೇದಿ ರೋಗ ಹರಡದಂತೆ ಏನು ಮಾಡಬೇಕು ?

1. ಅಡಿಗೆ ಮಾಡುವ ಮೊದಲು, ಆಹಾರ ಸೇವಿಸುವ ಮುನ್ನ ಅಥವಾ ದೊಡ್ಡಿಗೆ ಹೋಗಿ ಬಂದ ಮೇಲೆ ಸಾಬೂನು ಬಳಸಿ ಕೈ ತೊಳೆಯಬೇಕು. 2. ಉಗುರುಗಳನ್ನು ಉದ್ದವಾಗಿ ಬೆಳೆಸಬಾರದು, ಅವು ಸ್ವಚ್ಛವಾಗಿರಬೇಕು. 3. ಕುಡಿಯಲು ಸುರಕ್ಷಿತ ನೀರನ್ನೇ ಬಳಸಬೇಕು. 4. ಪಾತ್ರೆಗಳನ್ನು ಶುದ್ಧವಾದ ನೀರಿನಿಂದ ತೊಳೆಯಬೇಕು. 5. ಹಳಸಿದ, ಕೊಳೆತ, ಕೊಳೆಯಾದ ತರಕಾರಿ, ಸೊಪ್ಪು ಮುಂತಾದುವುಗಳನ್ನು ತಿನ್ನಬಾರದು. 6. ಹಣ್ಣು, ತರಕಾರಿಗಳನ್ನು ಶುದ್ಧವಾದ ನೀರಿನಿಂದ ತೊಳೆಯಬೇಕು. 7) ತಿನ್ನುವ ಪದಾರ್ಥಗಳ ಮೇಲೆ ನೊಣ, ಧೂಳು ಕೂರದಂತೆ ಮುಚ್ಚಿಡಬೇಕು.

ಅತಿಭೇದಿಯಿಂದ ಬಳಲುತ್ತಿರುವ ರೋಗಿಗೆ ಕೊಡಬೇಕಾದ ಆಹಾರ ವಿಧಾನ

1. ಹೆಚ್ಚಾಗಿ ನೀರಿನ ಪದಾರ್ಥ ಕೊಡಿರಿ. 2. ಎಳನೀರು. ಅನ್ನದ ಗಂಜಿ, ಟೀ, ನೀರು ಮಜ್ಜಿಗೆ, ಹಣ್ಣಿನ ರಸ, ನಿಂಬೇ ಪಾನಕ, ಸಕ್ಕರೆ–ಉಪ್ಪು ಮಿಶ್ರಿತ ನೀರನ್ನು ಮೇಲಿಂದ ಮೇಲೆ ಕೊಡಿರಿ. 3 ಶಿಶುಗಳಿಗೆ ಎದೆಯ ಹಾಲನ್ನು ಕೊಡುವುದನ್ನು ಮುಂದುವರಿಸಿರಿ

ದಲಿತ ವಿದ್ಯಾರ್ಥಿ - ಪೋಷಕರೇ ಗಮನಿಸಿ!

ನೀವು ಶಾಲಾ ಕಾಲೇಜುಗಳಿಗೆ ಪ್ರವೇಶ ಬಯಸಿ ಹೋದಾಗ ನಿಮ್ಮನ್ನು ಬಗೆ ಬಗೆಯ ಫೀಸು ಹಾಗೂ ಡೊನೇಷನ್ ತರುವಂತೆ ಕೇಳಬಹುದು. ಇದು ಸರ್ಕಾರಿ ಆದೇಶದ ವಿರುದ್ಧದ ಅಕ್ರಮ ಹಾಗೂ ಕಾನೂನಿನ ಉಲ್ಲಂಘನೆ, ದಯವಿಟ್ಟು ನೆನಪಿಡಿ. ನೀವು ಈ ಅಕ್ರಮವನ್ನು ಪ್ರಶ್ನಿಸಿದಾಗ ಮಾತ್ರ ಸರ್ಕಾರಿ ಆದೇಶ ಜಾರಿಗೆ ಬರುತ್ತದೆ, ಆಗ ಕಾನೂನು ನಿಮ್ಮನ್ನು ರಕ್ಷಿಸುತ್ತದೆ.

ದಲಿತ ಹಿತೈಷಿಗಳೂ ಈ ವಿಚಾರವನ್ನು ದಲಿತ ವಿದ್ಯಾರ್ಥಿ–ಪೋಷಕರಿಗೆ ತಿಳಿಸಿಕೊಡಬೇಕು.

ಪ್ರಕಟಣೆ :–
ದಲಿತ ಸಂಘರ್ಷ ಸಮಿತಿ

ಈ ಜಾಹೀರಾತನ್ನು ಆಸಕ್ತರು ಪುನರ್ ಪ್ರಕಟಿಸಬೇಕಾಗಿ ಕೋರಿದೆ.

ಹೆಗ್ಗೋಡಿನ ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ಡಿಪ್ಲೊಮಾ ಕೋರ್ಸ್‌ ಆಸಕ್ತರಿಗೆ ಕರೆ

ಕರ್ನಾಟಕ ರಾಜ್ಯ ಸರ್ಕಾರದ ಅಂಗೀಕಾರ ಅನುದಾನ ಪಡೆದಿರುವ ನೀನಾಸಮ್ ರಂಗ ಶಿಕ್ಷಣ ಕೇಂದ್ರವು ಒಂದು ವರ್ಷದ ಡಿಪ್ಲೊಮಾ ಕೋರ್ಸ್ ನಡೆಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್. ಎಸ್. ಎಲ್. ಸಿ; ಪಧವೀಧರರಿಗೆ ಆದ್ಯತೆಯಿರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆಯಿದೆ. ಎಲ್ಲರಿಗೂ ಸ್ಟೈಪೆಂಡ್ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ, ರಂಗಕಲ್ಪನೆ, ರಂಗ ಇತಿಹಾಸ, ನಾಟಕ ಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿಂದ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥ ಭಂಡಾರ ಹಾಗೂ ದೃಶ್ಯ–ಶ್ರವ್ಯ ಪರಿಕರಗಳ ಅನುಕೂಲತೆ ಇದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು 12 ಗಂಟೆಗಳಷ್ಟು ವೇಳೆ ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರಕ್ಕೆ 10 ರೂ. ಕಳಿಸಿ ಬರೆದುಕೊಳ್ಳಬಹುದು. ಪ್ರವೇಶಪತ್ರವನ್ನು ತುಂಬಿ 20-6-1990ರ ಒಳಗೆ ತಲುಪುವಂತೆ ಕಳಿಸಬೇಕು. 1-7-90 ರಂದು ಬೆಳಿಗ್ಗೆ 10 ಘಂಟೆಗೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಆಯ್ಕೆಯ ಸಂದರ್ಶನಕ್ಕಾಗಿ ಹೆಗ್ಗೋಡಿಗೆ ಬಂದು ಹಾಜರಾಗಬೇಕು. ಸಂದರ್ಶನಕ್ಕೆ ಪ್ರತ್ಯೇಕ ಕರೆಯೋಲೆ ಕಳುಹಿಸುವುದಿಲ್ಲ.

—ಪ್ರಿನ್ಸಿಪಾಲ್.

(ನಮ್ಮ ಮಲೆನಾಡಿನ ಹಲವು ಹವ್ಯಾಸಿ ತಂಡಗಳವರು ಸಹ ಇಂಥ ಗಂಭೀರ ತರಬೇತಿಯ ಅವಕಾಶವನ್ನು ಸದುಪಯೋಗಪಡಿಸಿಕೊಂಡಾರೆ? —ಸಂ.)

ಹೊಸ ಅಂಗನವಾಡಿ ಮತ್ತು ಕಟ್ಟಡ ಆರಂಭ

ಹೊಸೂರು : ಇಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ನಿರ್ಮಿಸಿರುವ ಅಂಗನವಾಡಿ ಕಟ್ಟಡದ ಹಾಗೂ ಸನಿಹದ ದೇವರಬಾನ್ ಎಸ್ಟೇಟ್‌ನಲ್ಲಿ ಹೊಸ ಅಂಗನವಾಡಿ ಕೇಂದ್ರದ ಉದ್ಘಾಟನೆಯನ್ನು ಬಿಂತ್ರವಳ್ಳಿ ಮಂಡಲ ಉಪ ಪ್ರಧಾನ ಕೆಸವೆ ಶಾಂತಾರಾಂ ಅಧ್ಯಕ್ಷತೆಯಲ್ಲಿ ಜಿ.ಪ. ಸದಸ್ಯ ಬಿ. ಜಿ. ಚಿದಂಬರ್ ಈಚೆಗೆ ನೆರವೇರಿಸಿದರು. ಸುಮಿತ್ರಮ್ಮ, ರಮೇಶ ರಾವ್, ವಿಷ್ಣು ಮೂರ್ತಿ ಹೆಬ್ಬಾರ್ ಮತ್ತು ಬಿಡಿಓ ರಾಮಮೂರ್ತಿ ಭಾಗವಹಿಸಿದ್ದರು. ಮಂಡಲ ಸದಸ್ಯ ಎಚ್. ಜಿ. ಚಂದ್ರಶೇಖರ್ ಸ್ವಾಗತಿಸಿ, ಹೊಸೂರು ಯುವಕ ಸಂಘದ ಉಪಾಧ್ಯಕ್ಷ ಶ್ರೀನಿವಾಸ್ ವಂದಿಸಿದರು.

ಧರ್ಮಸ್ಥಳ ಕ್ಷೇತ್ರದ ಆಶ್ರಯದಲ್ಲಿ ಬೆಳ್ತಂಗಡಿಯಲ್ಲಿ ನಡೆದಿರುವ ಗ್ರಾಮಾಭಿವೃದ್ಧಿ ಯೋಜನೆಯ ರೀತಿಯಲ್ಲೇ ಹೊಸೂರು ಗ್ರಾಮವನ್ನೂ ಸಹ ವೀರೇಂದ್ರ ಹೆಗ್ಗಡೆಯವರ ನೆರವಿನಿಂದ ಅಭಿವೃದ್ಧಿಪಡಿಸುವ ಉದ್ದೇಶವಿದ್ದು, ಈಗಾಗಲೇ ಈ ಬಗ್ಗೆ ಹೆಗ್ಗಡೆಯವರೊಂದಿಗೆ ಚರ್ಚಿಸಲಾಗಿದೆ ಹಾಗೂ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ಹೊಸೂರಿಗೆ ಭೇಟಿಕೊಟ್ಟು ಪ್ರಾರಂಭಿಕ ಸಮೀಕ್ಷೆ ನಡೆಸಿದ್ದಾರೆ ಎಂದು ತಿಳಿಸಿದ ರಮೇಶರಾವ್, ಇಂಥ ಅಭಿವೃದ್ಧಿ ಕಾರ್ಯಕ್ಕೆ ಹಣಕಾಸಿನ ಏರ್ಪಾಡು ಮಾತ್ರ

'ಮಂತ್ರ ಮಾಂಗಲ್ಯ' ಸರಳ ವಿವಾಹ

ಕೊಪ್ಪ : ರಾಷ್ಟ್ರ ಕವಿ ಕುವೆಂಪುರವರು ಸುಮಾರು 40 ವರ್ಷಗಳ ಹಿಂದೆ ರೂಪಿಸಿದ 'ಮಂತ್ರ ಮಾಂಗಲ್ಯ' ವಿಧಾನದ ಸರಳ ವಿವಾಹವೊಂದು ಇಲ್ಲಿನ ವೀರಭದ್ರ ದೇವಸ್ಥಾನದಲ್ಲಿ ಮೇ 31ರಂದು ನಡೆಯಿತು.

ತೀರ್ಥಹಳ್ಳಿ ತಾ॥ ವೇಗರವಳ್ಳಿ ಅಣ್ಣೇಗೌಡರ ಮಗ ಜಯರಾಂ – ನ ರಾ. ಪುರ ತಾ॥ ಗುಳದಮನೆ ಮಂಜಪ್ಪ ಗೌಡರ ಮಗಳು ಜಿ.ಎಂ. ನಳಿನಿ ಹಾಗೂ ತೀರ್ಥಹಳ್ಳಿ ತಾ॥ ತೂದೂರಿನ ಚಂದ್ರಪ್ಪಗೌಡರ ಮಗಳು ಅಂಬಿಕಾ–ಗುಳದಮನೆ ಮಂಜಪ್ಪ ಗೌಡರ ಮಗ ಪ್ರಕಾಶ್ ಇವರುಗಳು ನವ ದಂಪತಿಗಳಾದರು. ತೀರ್ಥಹಳ್ಳಿ ಕಾಲೇಜು ಉಪನ್ಯಾಸಕ ಕೋಣಂದೂರು ವೆಂಕಪ್ಪ ಗೌಡ ಕೆಳಗೆ ಶಿವಪ್ಪ ಮತ್ತು ಗೆಳೆಯರು ಕಾರ್ಯಕ್ರಮ ನಿರ್ವಹಿಸಿದರು. ಎರಡೂ ತಂಡಗಳಿಂದ ಸುಮಾರು 250 ಮಂದಿ ನೆಂಟರಿಷ್ಟರು ಮದುವೆಯಲ್ಲಿ ಸಡಗರದಿಂದ ಭಾಗವಹಿಸಿದ್ದರು.

ವಧೂವರರ ಆರ್ಥಿಕ "ಅಂತಸ್ತಿ"ಗೆ ತಕ್ಕಂತೆ ಲಕ್ಷಾಂತರ ರೂ. ವರದಕ್ಷಿಣೆ, ಬಾಜಾ ಬಜಂತ್ರಿ, ಪೊಳ್ಳು ಆಚರಣೆಗಳು, ಅದ್ದೂರಿಯ ಊಟೋಪಚಾರ–ಆಡಂಬರ–ವಿಜೃಂಭಣೆ–ದುಂದುಗಾರಿಕೆ–ಅಪವ್ಯಯ ಇವುಗಳಿಲ್ಲದೆ, ಮದುವೆಯ ಬಗ್ಗೆ ನಮ್ಮ ವೇದ, ಉಪನಿಷತ್ತು ಮುಂತಾದ ಜ್ಞಾನಭಂಡಾರಗಳಲ್ಲಿ ಎಂಥ ಗಂಭೀರ ಕಲ್ಪನೆ–ಉದ್ದೇಶಗಳನ್ನಿಟ್ಟು ರೀತಿ ನೀತಿ ರೂಪಿಸಿದ್ದಾರೆಂಬುದನ್ನು "ಮಂತ್ರ–ಮಾಂಗಲ್ಯ" ಬಿಂಬಿಸುತ್ತದೆ. ವಲ್ಲದೆ, ಜನರ ಸಹಕಾರವೂ ಅಗತ್ಯ ಎಂದರು.

ಮಂಜುನಾಥ್–ಜ್ಯೋತಿ ಜಾತ್ಯತೀತ ಸರಳ ವಿವಾಹ

ಕೊಪ್ಪದ ಸ್ಟೈಲೊ ಟೈಲರ್ಸ್ ಮಾಲಿಕ ಜಿ.ಕೆ. ಮಂಜುನಾಥ್ ಮತ್ತು ಎನ್. ಎ. ಜ್ಯೋತಿ ಮಾರ್ಚ್ 10ರಂದು ಸೋಮ್ಲಾಪುರ ದೇವಸ್ಥಾನದಲ್ಲಿ ಸರಳವಾಗಿ ಮದುವೆಯಾಗಿದ್ದಾರೆ

ಅಡಿಕೆ ಧಾರಣೆ

ಶಿವಮೊಗ್ಗ : 2–6–1990
ಸರಕು : 4300–4789
ಬೆಟ್ಟೆ : 3489–3884
ಗೊರಬಲು : 2006–2537

ಸಾಗರ 2–6–1990
ಇಡಿ : 3419–3819
ಆಪಿ : 4219–4586
ಚಾಲಿ : 2239–2419
ಸಿಪ್ಪೆ ಗೋಟು : 1389–1565

ಕೈಗಾರಿಕಾ ತರಬೇತಿಗೆ ಅರ್ಜಿ ಆಹ್ವಾನ

ರಾಜ್ಯದ ಈ ಕೆಳಗಿನ ವಿವಿಧೆಡೆಗಳ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ೧೯೯೦ನೇ ಸಾಲಿಗೆ ವಿವಿಧ ತಾಂತ್ರಿಕ ಮತ್ತು ತಾಂತ್ರಿಕೇತರ ವೃತ್ತಿಗಳಲ್ಲಿ ತರಬೇತಿ ಪಡೆಯಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರು ನಗರದ ಹೊಸೂರು ರಸ್ತೆ ಹಾಗೂ ತುಮಕೂರು ರಸ್ತೆಯಲ್ಲಿರುವ ತರಬೇತಿ ಕೇಂದ್ರ, ತುಮಕೂರು, ಅಮ್ಮಸಂದ್ರ, ಭದ್ರಾವತಿ ಬಿಜಾಪುರ, ಬೆಳಗಾವಿ (ಮಹಿಳಾ ಹಾಗೂ ಪುರುಷರ), ಬೀದರ್, ಚಿಕ್ಕಮಗಳೂರು, ದಾವಣಗೆರೆ, ಕೋಲಾರ ಜಿಲ್ಲೆಯ ದೇವರಾಯ ಸಮುದ್ರ ಹಾಗೂ ಕೆ.ಜಿ.ಎಫ್., ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಹಾಗೂ ಕನಕಪುರ, ಗುಲ್ಬರ್ಗ (ಮಹಿಳಾ ಹಾಗೂ ಪುರುಷರ) ವಾಡಿ (ಗುಲ್ಬರ್ಗಾ ಜಿಲ್ಲೆ) ಹುಬ್ಬಳ್ಳಿ, ಹಾಸನ, ಹೊಳೇನರಸೀಪುರ, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹಳಿಯಾಳ ಮತ್ತು ಹೊನ್ನಾವರ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ಹಾಗೂ ಹೂವಿನಹಡಗಲಿ, ಮೈಸೂರು, ಮಂಗಳೂರು, ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಪೊನ್ನಂಪೇಟೆ (ಮಹಿಳಾ) ರಾಯಚೂರು, ಮಂಡ್ಯ, ಮಳವಳ್ಳಿ ಮತ್ತು ಶಿವಮೊಗ್ಗ (ಮಹಿಳಾ)

ನಿಗದಿತ ಅರ್ಜಿ ಫಾರಂ ಹಾಗೂ ಇತರ ಮಾಹಿತಿಗಳನ್ನು ಸಂಬಂಧಪಟ್ಟ ಕೈಗಾರಿಕಾ ತರಬೇತಿ ಕೇಂದ್ರಗಳ ಪ್ರಿನ್ಸಿಪಾಲರಿಂದ ೫ ರೂ. ಶುಲ್ಕ ಸಲ್ಲಿಸಿ ಪಡೆಯಬಹುದು. ಅಂಚೆ ಮೂಲಕ ಅರ್ಜಿ ನಮೂನೆ ಪಡೆಯಲು ೫ ರೂ. ಮನಿಯಾರ್ಡರ್ ಹಾಗೂ ರೂ. ೨.೫೦ ರ ಅಂಚೆ ಸ್ಟ್ಯಾಂಪ್ ಹಚ್ಚಿದ ಸ್ವ ವಿಳಾಸವಿರುವ ಲಕೋಟೆ ಕಳುಹಿಸಬೇಕು.

ಭರ್ತಿ ಮಾಡಿದ ಅರ್ಜಿಗಳನ್ನು ಪ್ರಮಾಣ ಪತ್ರಗಳ ಪ್ರತಿಗಳೊಂದಿಗೆ ಸಂಬಂಧಿಸಿದ ಪ್ರಿನ್ಸಿಪಾಲರಿಗೆ ಜೂನ್ ೧೫ರೊಳಗೆ ತಲುಪಿಸತಕ್ಕದ್ದು.

ಬಸ್ ಪಲ್ಟಿ

ಜಯಪುರ : ಬಾಳೆಹೊನ್ನೂರು–ಮಂಗಳೂರು ಶಂಕರ್ ಮಿನಿ ಬಸ್ಸು ಮೇ 31 ರಂದು ಬೆಳಿಗ್ಗೆ ಇಲ್ಲಿಂದ ಲೋಕನಾಥಪುರ ಮಾರ್ಗದ ಮಧ್ಯೆ ಅದೇ ಕಂಪೆನಿಯ ಇನ್ನೊಂದು ಬಸ್ಸಿಗೆ ದಾರಿ ಕೊಡಲು ಬದಿಗೆ ಸರಿದಾಗ ಜಾರಿ ಮಗ್ಗುಲಾಗಿ ಪಲ್ಟಿಯಾಯಿತು. ಬಸ್ಸಿನಲ್ಲಿ ಭರ್ತಿ ಪ್ರಯಾಣಿಕರಿದ್ದರೂ ಯಾರಿಗೂ ಪೆಟ್ಟಾಗದಿದ್ದುದೊಂದು ವಿಶೇಷ. ಬಸ್ಸಿಗೂ ಹೆಚ್ಚೇನೂ ಜಖಂ ಆಗಲಿಲ್ಲ. 11 ಗಂಟೆಯ ಹೊತ್ತಿಗೆ ಬಸ್ಸನ್ನೆತ್ತಿ ಒಯ್ಯಲಾಯಿತು.

ಯಂಗ್‌ಸ್ಟಾರ್ ಕ್ರಿಕೆಟ್ ಕ್ಲಬ್ ನಾರ್ವೆ – ಪದಾಧಿಕಾರಿಗಳು

ಪಿ ಸಾದಿಕ್ (ಅಧ್ಯಕ್ಷ), ಎಂ. ಮುಷ್ತಾಕ್ (ಉಪಾಧ್ಯಕ್ಷ), ಮಂಜುನಾಥ (ನಾಯಕ), ಮನ್ಸೂರ್ (ಉಪ ನಾಯಕ) ಜಿ. ಹರೀಶ್ (ಕಾರ್ಯದರ್ಶಿ), ಜಯೇಶ್ (ಉಪ ಕಾರ್ಯದರ್ಶಿ), ಜಹೀರ್ ಸಾದಿಕ್ (ಖಜಾಂಚಿ)

ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ

ಪ್ರಕಟಣೆ

ಈ ಮೇಲ್ಕಂಡ ಸಂಸ್ಥೆಯ ವತಿಯಿಂದ 1989–90ನೇ ಸಾಲಿನ ಪ್ರಥಮ ವರ್ಷದ ಸಿವಿಲ್, ಇಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಡಿಪ್ಲೋಮಾ ತರಗತಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ : ಪ್ರವೇಶ ಬಯಸುವ ಅಭ್ಯರ್ಥಿಗಳು ಎಸ್. ಎಸ್. ಎಲ್. ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಶೇಕಡ 45 ಅಂಕಗಳನ್ನು ಗಳಿಸಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು (ಎಸ್‌ಸಿ ಮತ್ತು ಎಸ್‌ಟಿ) ಹಾಗೂ ಗ್ರೂಪ್–ಎ ಅಭ್ಯರ್ಥಿಗಳು ಕನಿಷ್ಠ ಶೇಕಡ 35 ಅಂಕಗಳನ್ನು ಗಳಿಸಿರಬೇಕು. ಅಲ್ಲದೆ ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ, ಗ್ರೂಪ್–ಇ ಮತ್ತು ಗ್ರಾಮೀಣ ಅಭ್ಯರ್ಥಿಗಳು ಕನಿಷ್ಠ ಶೇಕಡ 40 ಅಂಕಗಳನ್ನು ಗಳಿಸಿರಬೇಕು. 1981ರ ಜನಗಣತಿಯ ಪ್ರಕಾರ 20,000 ಅಥವಾ ಕಡಿಮೆ ಜನಸಂಖ್ಯೆಯುಳ್ಳ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಎಂಟು (8) ವರ್ಷಗಳವರೆಗೆ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳನ್ನು ಗ್ರಾಮೀಣ ಅಭ್ಯರ್ಥಿಗಳೆಂದು ಪರಿಗಣಿಸಲಾಗಿದ್ದು, ಗ್ರಾಮೀಣ ಗುಂಪಿನಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ಕರ್ನಾಟಕದಲ್ಲಿ ಮಾನ್ಯತೆ ಪಡೆದ ಶಿಕ್ಷಣಾಲಯದಿಂದ ಪಡೆದ ದೃಢೀಕರಣ ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರವೇಶವನ್ನು ಪಡೆಯಬಹುದು.

ಕರ್ನಾಟಕದವರಾಗಿರದ ಇತರ ರಾಜ್ಯಗಳ ಅಭ್ಯರ್ಥಿಗಳು ಪ್ರವೇಶ ಪಡೆಯುವ ಮೊದಲು 'ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್' ಇವರಿಂದ ಪಡೆದ ಅರ್ಹತಾ ಸರ್ಟಿಫಿಕೇಟನ್ನು ಹಾಜರುಪಡಿಸಬೇಕು.

ಅರ್ಜಿ ಫಾರಂಗಳನ್ನು ರೂ. 25–00 ಶುಲ್ಕ ನೀಡಿ ಸಹ್ಯಾದ್ರಿ ಪಾಲಿಟೆಕ್ನಿಕ್ ಕಛೇರಿ, ವನಶ್ರೀ ಬಿಲ್ಡಿಂಗ್, ಕೊಪ್ಪ ರಸ್ತೆ, ತೀರ್ಥಹಳ್ಳಿ ಇಲ್ಲಿ ಪಡೆಯಬಹುದು.

ಹೆಚ್ಚಿನ ವಿವರಗಳು ಬೇಕಾದಲ್ಲಿ ಪ್ರಿನ್ಸಿಪಾಲ್‌ರವರನ್ನು ಸಹ್ಯಾದ್ರಿ ಪಾಲಿಟೆಕ್ನಿಕ್ ವನಶ್ರೀ ಬಿಲ್ಡಿಂಗ್, ತೀರ್ಥಹಳ್ಳಿ ಇಲ್ಲಿ ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 10–6–1990.

(ಸಹಿ) ಪ್ರಿನ್ಸಿಪಾಲ್, ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ.
(ಸಹಿ) ಎಂ. ಆರ್. ಧರ್ಮಯ್ಯ ಗೌಡ ಮ್ಯಾನೇಜಿಂಗ್ ಡೈರೆಕ್ಟರ್

ಕೊಪ್ಪ ತಾಲ್ಲೂಕು ತಹಸೀಲ್ದಾರ್ ಮತ್ತು ಖಾಫಿ ನೋಂದಣಾಧಿಕಾರಿಯವರ ಕಾರ್ಯಾಲಯ, ಕೊಪ್ಪ

ಸಂಖ್ಯೆ : ಸಿ.ಆರ್‌ಸಿ /ಸಿ.ಆರ್ /37/89-90. ದಿನಾಂಕ 24–5–199

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಮೇಗುಂದಾ ಹೋಬಳಿ, ದೇವಗೋಡು ಗ್ರಾಮದ ಬರಗಳವಾಸಿ ಶ್ರೀಮತಿ ರತ್ನಮ್ಮ ಕೋಂ ದಿವಂಗತ ಪುಟ್ಟೇಗೌಡ ಎಂಬುವವರು ಇದೇ ದೇವಗೋಡು ಗ್ರಾಮದ ಸ ನಂ 12 ಪಿಯಲ್ಲಿ 5–00 ಎಕ್ರೆ ಪ್ರದೇಶಕ್ಕೆ ಅವರ ಯಜಮಾನರ ಹೆಸರಿಗೆ ನೀಡಿದ್ದ ಸಿಆರ್‌ಸಿ 6980/6–12–67 ಕಳೆದು ಹೋಗಿರುವುದಾಗಿಯೂ ಹಾಗೂ ಅವರ ಯಜಮಾನರು ಮರಣ ಹೊಂದಿರುವುದರಿಂದ ಸದ್ರಿ ಸಿಆರ್‌ಸಿಯನ್ನು ರದ್ದುಪಡಿಸಿ, ತಮ್ಮ ಹೆಸರಿಗೆ ಹೊಸದಾಗಿ ಸಿಆರ್‌ಸಿಯನ್ನು ನೀಡಬೇಕೆಂದೂ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ಮೇಲ್ಕಂಡ ಅರ್ಜಿದಾರರಿಗೆ ಅವರ ಯಜಮಾನರು ಹೊಂದಿದ್ದ ಸಿಆರ್‌ಸಿ 6980/6–12–67 ಅನ್ನು ರದ್ದುಪಡಿಸಿ, ಹೊಸದಾಗಿ ಸಿಆರ್‌ಸಿ ನೀಡುವ ಬಗ್ಗೆ ಯಾರಿಂದಲಾದರೂ ತಕರಾರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳ ಒಳಗಾಗಿ ಲಿಖಿತ ಮೂಲಕ ಈ ಕಾರ್ಯಾಲಯಕ್ಕೆ ತಿಳಿಸಲು ಕೋರಿದೆ.

(ಸಹಿ) ತಹಸೀಲ್ದಾರ್, ಕೊಪ್ಪ ತಾ॥ ಮತ್ತು
ಖಾಫಿ ನೋಂದಣಾಧಿಕಾರಿಗಳು, ಕೊಪ್ಪ ತಾ॥ ಕೊಪ್ಪ
ದಿನಾಂಕ 25–5–90

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ